ಸದನದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ:

ಅಧ್ಯಕ್ಷರು: ರೆಡ್ಡಿಯವರೆ, ಒಂದು ಸಲಹೆ ಇದೆ. ಎನ್‌ಕ್ರೋಚ್‌ಮೆಂಟ್ ಆಫ್ ಟ್ಯಾಂಕ್‌ಬೆಡ್, ರೀಛಾರ್ಜಿಂಗ್, ಡೀಸಿಲ್ಟಿಂಗ್ ಇದೆಲ್ಲಾ ಬಹಳ ದೊಡ್ಡ ವಿಷಯ. ನಮ್ಮ ಮೈದಾನ ಜಿಲ್ಲೆಗಳವರಿಗೆ ಬಹಳ ತೀವ್ರವಾಗಿ ಕಾಡುತ್ತಿರುವ ಸಮಸ್ಯೆ ಇದು. ಇದನ್ನು ಹೆಚ್ಚು ಇಲ್ಲಿ ಈಗ ಡಿಸ್‌ಕಸ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಇದು ಪ್ರಶ್ನೋತ್ತರ ವೇಳೆ. We will not be able to discuss it in Question Hour. I will earmark some time exaclusively for this subject. We will take it up later. Kindly cooperate.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಗಬಹುದು.

ವರಾಹಿ ಜಲವಿದ್ಯುತ್ ಯೋಜನೆಯಿಂದ ತೊಂದರೆಗೊಳಗಾದ ಕುಟುಂಬಗಳಿಗೆ ಉದ್ಯೋಗ

9 (43)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ವರಾಹಿ ಜಲ ವಿದ್ಯುತ್ ಯೋಜನೆಯಡಿಯಲ್ಲಿ ಮನೆ ಜಮೀನು ಕಳೆದುಕೊಂಡ ಒಟ್ಟು ಕುಟುಂಬಗಳೆಷ್ಟು?

ಆ) ಹೀಗೆ ಮನೆ ಜಮೀನು ಕಳೆದುಕೊಂಡ ಕುಟುಂಬಗಳಿಗೆ ವಿದ್ಯುತ್ ನಿಗಮದಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬುವಾಗ ಕೆಲಸ ಕೊಡಬೇಕೆಂಬ ನಿಯಮ ಇದೆಯೆ?

ಇ) ಈ ನಿಯಮದ ಪ್ರಕಾರ ಡಿಸೆಂಬರ್ 31, 1997ರವರೆಗೆ ಎಷ್ಟು ಕುಟುಂಬಕ್ಕೆ ಉದ್ಯೋಗಾವಕಾಶ ಲಭ್ಯವಾಗಿದೆ? (ವಿವರ ನೀಡುವುದು)

ಈ) ಉಳಿದ ಕುಟುಂಬಗಳ ಸದಸ್ಯರಿಗೆ ಯಾವಾಗ ಉದ್ಯೋಗ ನೀಡಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು)

ಅ) 1775 ಕುಟುಂಬಗಳು (ಚಕ್ಕಾ ಮತ್ತು ವರಾಹಿ ಸೇರಿ)

ಆ) ಹುದ್ದೆಗಳು ಖಾಲಿ ಇದ್ದಾಗ ಜಮೀನು ಕಳೆದುಕೊಂಡು ಕುಟುಂಬಗಳ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯದ ಮೇಲೆ ಕೆಲಸವನ್ನು ಕೊಡಲು ಅವಕಾಶವಿದೆ.

ಇ) ಡಿಸೆಂಬರ್ 31, 1997ರವರೆಗೆ ಒಟ್ಟು 265 ಕುಟುಂಬಗಳಿಗೆ ಉದ್ಯೋಗವಕಾಶ ಲಭ್ಯವಾಗಿದೆ. ಅಂತಹ ಕುಟುಂಬಗಳ ಅಭ್ಯರ್ಥಿಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ಸದ್ಯ ನಿಗಮದಲ್ಲಿ ಕಾಮಗಾರಿ ಕೆಲಸಗಳು ಪೂರ್ಣಗೊಂಡಿರುವುದರಿಂದ ಖಾಲಿ ಹುದ್ದೆಗಳು ಸೃಷ್ಟಿಯಾಗಲು ಅವಕಾಶವಿಲ್ಲ. ಭವಿಷ್ಯದಲ್ಲಿ ಹೊಸ ಸಿಬ್ಬಂದಿಗಳ ಅವಶ್ಯಕತೆ ಉಂಟಾದಾಗ ಉಳಿದ ಕುಟುಂಬಗಳ ಸದಸ್ಯರನ್ನು ಪ್ರಾಶಸ್ತ್ಯದ ಮೇಲೆ ಕೆಲಸಕ್ಕಾಗಿ ಪರಿಗಣಿಸಲಾಗುವುದು.

LIST OF CANDIDATES BELONGING TO SUBMERGIBLE AREA APPOINTED IN VHEP

Sl.No	Name	Appointed as
1	2	3
	Sriyuths/Smt:	
1.	Srinivas	Helper
2.	H.M.Giriyappa	Helper
3.	K.C.Ramachandra	Helper(T)
4.	Gopala Gowda	Helper(T)
5.	D.T.Thimmegowda	Helper(T)
6.	Sreedhara	Sec.Watchman
7.	Jagadeeswara	Helper
8.	Durgappa Gowda	Helper
9.	N.Parameshwara	Helper(T)
10.	H.K.Tekappa Gowda	Sec.Watchman
11.	Yogappa Gowda	Helper

12.	H.S.Achutha	Sec.Watchman
13.	Karimane Manappa Naik	Helper
14.	Piyus D'souza	Helper(T)
15.	N.Parameshwarappa	Helper(T)
16.	Vasudeva	-do-
17.	H.N.Nanjappa Jois	Helper
18.	Vedakashi	Ayah
19.	H.T.Gopala	Helper
20.	B.T.Sheshamma	Ayah
21.	N.L.Subha Rao	Helper
22.	G.R.Dakappagowda	Helper(T)
23.	Srinivas	-do-
24.	Erappa	-do-
25.	N.R.Jayasheela	Helper
26.	M.S.Laxamangowda	Helper(T)
27.	Manjachari.H	Helper
28.	Shankarappagowda.H.G	-do-
29.	P.Ramappa	-do-
30.	Subbaiah	-do-
31.	B.S.Manjachari	Helper(T)
32.	C.S.Baskar Bhatta	Helper

33.	R.Ramappagowda	-do-
34.	Hoovappagowda	-do-
35.	H.R.Kadappagowda	-do-
36.	Yenkappagowda	-do-
37.	Devendragowda K.S.	-do-
38.	V.Dhanaraj	-do-
39.	H.V.Lakshmikantha	Helper (T)
40.	K.Nagappa	Helper
41.	B.T.Dharamappagowda	-do-
42.	Veerappa	-do-
43.	S.E.Subbaiah Gowda	Helper (T)
44.	H.T.Lokappagowda	Sec.Watchman
45.	R.M.Seshagiri	Helper (T)
46.	S.A.Gundappagowda	-do-
47.	Dharmanaik	-do-
48.	R.S.Dinesh	-do-
49.	Bullappagowda	-do-
50.	H.T.Ramadasgowda	-do-
51.	K.S.Sridhar	-do-
52.	H.Kantesh	-do-
53.	H.Ramakrishnabhatta	-do-

54.	N.Srikanta	Helper (T)
55.	M.N.Shankarappa	-do-
56.	Duggappa	-do-
57.	M.S.Thimmappagowda	-do-
58.	N.C.Chandrappa	-do-
59.	K.Krishnamurthy	-do-
60.	B.Madappa	-do-
61.	N.T.Premamurthy	-do-
62.	Samuel D'sa	-do-
63.	S.T.Vasappagowda	-do-
64.	Achutha	-do-
65.	K.Shivappa	-do-
66.	M.S.Sheshagiri	-do-
67.	T.Ramappa	-do-
68.	Pandu	-do-
69.	N.N.Channappagowda	-do-
70.	H.R.Lokappa	Helper (O)
71.	B.P.Sridhara	Opt.(Typing)
72.	Kanajakshamma	-do-
73.	H.N.Nagarathna	-do-
74.	Chandramathi K.S.	-do-

75.	S.L.Nagesh	Asst.(A/cs)
76.	H.C.Venkatesha Gowda	-do-
77.	H.T.Gurumurthy	Helper
78.	S.P.Krishnamurthy	-do-
79.	H.V.Shanthappa	-do-
80.	S.Krishnamurthy	-do-
81.	I.H.Venkatesh	-do-
82.	I.K.Ashok	-do-
83.	V.Devaraj	-do-
84.	Devaki	Opt.(Typing)
85.	Narasimhamurthy	-do-
86.	Parvathappagowda	Helper
87.	I.C.Venkatesha	Security Watchman
88.	Jayakumara H.S	-do-
89.	H.D.Giriyappa	-do-
90.	K.Raju	-do-
91.	T.S.Nagraj	-do-
92.	K.E.Sudhakara	-do-
93.	K.Gopal	-do-
94.	Giddappa	-do-
95.	B.T.Ramappa	-do-

96.	H.L.Ramesha	-do-
97.	N.Chandrashekhar	-do-
98.	K.M.Krishnamurthy	-do-
99.	T.Gundappagowda	-do-
100.	Rameshwarappa	-do-
101.	H.P.Gangadharappa	-do-
102.	Vijendra	-do-
103.	M.P.Ramaswamy	-do-
104.	H.S.Nagesha	-do-
105.	S.D.Prakasha	-do-
106.	G.Manjappa	-do-
107.	C.Ravindra	-do-
108.	K.S.Yajna Narayana Jois	-do-
109.	Kusappagowda	-do-
110.	T.K.Kallappa	-do-
111.	Lingappa H	Sec.Watchman
112.	N.N.Ramachandra	-do-
113.	L.M.Ramappa	-do-
114.	K.N.Jayasheelagowda	-do-
115.	Stephen Philip	-do-
116.	Chandrappa	-do-

117.	K.Kittappa	-do-
118.	S.P.Somashekhara	-do-
119.	Ramappa	-do-
120.	Thimmappashetty	-do-
121.	Jnanendra H.P.	-do-
122.	O.T.Ningappa	-do-
123.	R.Srinivasa	-do-
124.	S.T.Mahabaleswar	-do-
125.	Kadappagowda	-do-
126.	H.Purushothama	-do-
127.	N.G.Shankara.A	-do-
128.	K.S.Krishnappagowda	-do-
129.	K.S.Chinnappagowda	-do-
130.	P.Ganesha	-do-
131.	C.Dakappa	-do-
132.	K.S.Nagarajagowda	-do-
133.	C.N.Venugopal	-do-
134.	K.M.Ramachandra	-do-
135.	A.B.Chandrashekhara	-do-
136.	Y.T.Ravi	-do-
137.	H.M.Mahesh	-do-

138.	Panduranga Madiga	-do-
139.	Rajaiah Gowda	-do-
140.	Manjappa Naik	-do-
141.	K.R.Ravishankar	-do-
142.	Kusappa	-do-
143.	D.Ramakrishna	-do-
144.	B.S.Nagaraja	-do-
145.	M.C.Manjadri Gowda	-do-
146.	R.Dayananda	-do-
147.	H.M.Suresh	-do-
148.	B.S.Alvis D'mello	-do-
149.	Hoovappa	-do-
150.	K.Venkappa	-do-
151.	H.S.Manjunath	-do-
152.	G.Manjappa	-do-
153.	G.Nagappa Gowda	-do-
154.	S.L.Satyanarayan	-do-
155.	B.A.Mahabaleshwara	-do-
156.	S.P.Bhaskar	-do-
157.	K.N.Gopala	-do-
158.	M.Muniswamy	-do-

159.	Y.G.Gurumurthy	-do-
160.	M.H.Manappa	-do-
161.	Dhakya Naik	-do-
162.	S.V.Venugopal	-do-
163.	M.T.Nagappa Gowda	-do-
164.	M.Muniswamy	-do-
165.	Y.G.Gurumurthy	-do-
166.	Nagendrappa.G	-do-
167.	B.T.Parvatappa	Sec.Watchman
168.	Hulugappa	-do-
169.	K.S.Rajkumar	-do-
170.	T.V.Subbanna	Helper (T)
171.	Nagappagowda	-do-
172.	T.N.Prabhakar	Helper
173.	Nagappa	-do-
174.	K.S.Nagaraja Gowda	-do-
175.	N.Gurumurthy	-do-
176.	Nagappa	-do-
177.	P.T.Srinivasa	-do-
178.	K.Ramaswamy	Asst.(A/cs)
179.	K.D.Styanarayana	-do-

180.	K.S.Nagaraja	-do-
181.	Y.V.Subramanya Jois	-do-
182.	M.S.Ramachandra	-do-
183.	H.M.Suresh	-do-
184.	K.Veenabai	-do-
185.	Y.N.Ramesh	-do-
186.	C.Sudesh Rao	-do-
187.	K.Ravindra	-do-
188.	M.C.Devamma	-do-
189.	U.T.Shamaiah	-do-
190.	M.P.GiddappaGowda	-do-
191.	M.D.Aravinda	-do-
192.	N.G.Vedavathi	Ast.(Admn)
193.	M.Thimmappa	-do-
194.	G.C.Sadeshiva	-do-
195.	Y.S.Bharati	-do-
196.	Chandrappa	-do-
197.	H.N.Praveena	-do-
198.	S.G.Jayanna	-do-
199.	I.G.Ramesh	-do-
200.	D.T.Puttappa Gowda	-do-

201.	H.D.Prabhavathi	-do-
202.	B.A.Ananthamurthy	-do-
203.	H.V.Poornima	-do-
204.	K.S.Murthy	-do-
205.	M.D.Nagaraja	-do-
206	H.T.Diwakara	-do-
207.	S.Chandrashekhara Setty	-do-
208.	I.S.Manjunatha	-do-
209.	B.G.Satish	-do-
210.	B.C.Ravindra	-do-
211.	K.T.Nagendra	-do-
212.	S.Umesha	-do-
213.	S.Bhagyavathi	Typist
214.	K.R.Kavitha	-do-
215.	G.R.Shivananda Pandit	-do-
216.	N.Chandrashekhar	-do-
217.	H.S.Ramesh	-do-
218.	E.M.Jayanthi	-do-
219.	Nagavenamma	-do-
220.	M.N.Mahesh	-do-
221.	S.S.Chandrashekhar	-do-

222.	Lokappa	Security Watchman
223.	H.D.Sridhara	-do-
224.	N.L.Azizasab	-do-
225.	H.D.Chandrashekhar	-do-
226.	K.J.Vijayakumar	-do-
227.	Veerappa Gowda	-do-
228.	L.P.Sheshappa	-do-
229.	Yellappa	-do-
230.	H.M.Venkatesh	Helper (Civil Works)
231.	C.Alikhan	-do-
232.	L.O.Venkatesh	-do-
233.	K.R.Bhojaraj	-do-
234.	B.C.Ramesh	-do-
235.	A.T.Srinivasa	-do-
236.	A.K.Kollura	-do-
237.	D.M.Krishnamurthy	-do-
238.	C.Mahalinga	-do-
239.	H.C.Dinesha	-do-
240.	B.P.Mahesha	-do-
241.	T.L.Gopala	-do-
242.	K.Mahesha	-do-

243.	C.Susheelamma	-do-	
244.	D.R.Papanna	-do-	
245.	B.N.Devendrappa	-do-	
246.	Hombegowda	Helper (Office)/PH	
247.	B.Shankar	-do-	
248.	H.P.Shashikala	-do-	
249.	N.Srinivas	-do-	
250.	I.T.Sudhakar	-do-	
251.	K.Chandrashekhar	-do-	
252.	Vasanthakumar	Asst.Teacher (P.E.)	
253.	S.Vijaya	-do-	
254.	I.T.Gurumurthy	-do-	
255.	H.G.Sujaya	Asst.(Admn.)	
256.	Y.S.Shantaram	Asst.(Mech.)	VHEP
257.	Y.K.Venkatesh Hegde	-do-	
258.	Chandrashekhar Shetty	-do-	
259.	M.R.Kumar	J.E.(Elecl.)	
260.	D.K.Nagesh	-do-	
261.	M.A.Visweswaraya	J.E.(Mech.)	
262.	P.Vasanthakumar	-do-	
263.	S.Ganapathy	J.E.(Elecl.)	

264.	Jnanamurthy	J.E.(Mech.))	SVP
		)	
265.	Ashokumar	-do-)	
266.	L.Harisha	-do-	VHEP

Note: One Helper (Office) (PH) not reported.

Total - 265 only.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ, ಅವರು ಉತ್ತರದಲ್ಲಿ ವರಾಹಿ ಜಲವಿದ್ಯುತ್ ಯೋಜನೆ ಅಡಿಯಲ್ಲಿ ಮನೆಮಠಗಳನ್ನು ಕಳೆದುಕೊಂಡವರಿಗೆ ಹುದ್ದೆಗಳು ಖಾಲಿ ಇದ್ದಾಗ ಜಮೀನು ಕಳೆದುಕೊಂಡ ಕುಟುಂಬಗಳ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯದ ಮೇಲೆ ಕೆಲಸಗಳನ್ನು ಕೊಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ. ಆದರೆ ನನ್ನ ಹತ್ತಿರ ಮಾಹಿತಿ ಇರುವುದನ್ನು ಕೊಡುತ್ತೇನೆ. ತಮಗೆ ಗೊತ್ತಿದ್ದರೆ ಹೇಳಿ. ತಾವು ಇಂಜಿನಿಯರುಗಳನ್ನು ಇತ್ತೀಚೆಗೆ ನೇಮಕ ಮಾಡಿಕೊಳ್ಳುವಂಥ ಕಾಲದಲ್ಲಿ ನಿಜವಾದ ಸಂತ್ರಸ್ತರಿಗೆ ಉದ್ಯೋಗವನ್ನು ಕೊಡದೆ ಬೇರೆಯವರನ್ನು ಆಯ್ಕೆ ಮಾಡಿಕೊಂಡಿದ್ದೀರಿ. ಸಂತ್ರಸ್ತರನ್ನು ವೈಟಿಂಗ್ ಲಿಸ್ಟ್‌ನಲ್ಲಿ ಇಟ್ಟಿದ್ದೀರಿ. ತಮ್ಮ ಉತ್ತರದಲ್ಲಿ ಇದುವರೆಗೆ 1775 ಕುಟುಂಬಗಳ ಅಭ್ಯರ್ಥಿಗಳ ಪೈಕಿ ಉದ್ಯೋಗ ಸಿಕ್ಕಿರುವಂಥದ್ದು 265 ಜನರಿಗೆ. ಅದಕ್ಕೋಸ್ಕರ ನಾನು ಕಳಕಳಿಯಿಂದ ಕೇಳುತ್ತೇನೆ, ಉದ್ಯೋಗ ಖಾಲಿ ಇದ್ದಾಗ ಸಂತ್ರಸ್ತರಿಗೆ ಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಈ ಸ್ಥಿತಿ ಬರುತ್ತಾ ಇರಲಿಲ್ಲ. ಆದ್ದರಿಂದ ಬೇರೆಯವರಿಗೆ ಉದ್ಯೋಗ ಕೊಟ್ಟಿರುವುದು ನಿಜವೇ? ಈ ಕೊರತೆ ಆಗದಂತೆ ಈ ಸಂತ್ರಸ್ತರಿಗೆ ಕೊಡುವುದಕ್ಕೆ ಏನಾದರೂ ಕಾರ್ಯಕ್ರಮ ಇದೆಯೆ? 1775 ಕುಟುಂಬದಲ್ಲಿ ಎಷ್ಟು ಸಂತ್ರಸ್ತರಿಗೆ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ್: ಮಾನ್ಯ ಸದಸ್ಯರು ಹೇಳಿದ ಹಾಗೆ 1775 ಕುಟುಂಬಗಳು ಈ ಒಂದು ಜಲ ವಿದ್ಯುತ್ ಯೋಜನೆಯಲ್ಲಿ ಜಮೀನು ಕಳೆದುಕೊಂಡಿವೆ. ಈಗಾಗಲೇ ಸರ್ಕಾರದ ವತಿಯಿಂದ 265 ಹುದ್ದೆಗಳನ್ನು ನಾವು ಕೊಟ್ಟಿದ್ದೇವೆ. ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಯಲ್ಲಿ ವೈಟಿಂಗ್ ಲಿಸ್ಟ್ ಇಟ್ಟಿದ್ದಾರೆ ಎಂದು ಹೇಳಿದ್ದಾರೆ. ಸರ್ಕಾರದಲ್ಲಿ ಅವಕಾಶ ಇದೆ. ಸಂತ್ರಸ್ತರಿಗೆ ಹುದ್ದೆಗಳನ್ನು ಕೊಡಬೇಕೆಂದಿದೆ. ವೈಟಿಂಗ್ ಲಿಸ್ಟ್ ಬಗ್ಗೆ ಮಾಹಿತಿ ನನಗೆ ಬಂದಿಲ್ಲ. ಆದಿದ್ದರೆ, ಅದನ್ನು ಕೊಟ್ಟರೆ ತಕ್ಷಣ ನೇಮಕ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈ ಒಂದು ಪಟ್ಟಿಯನ್ನು ನೋಡಿ. ದಯವಿಟ್ಟು ಸಭೆಯೂ ಇದನ್ನು ಗಮನಿಸಬೇಕು. ಈ ರಾಜ್ಯಕ್ಕೆ ಬೆಳಕು ಕೊಡುವುದಕ್ಕೋಸ್ಕರ ಜಮೀನು ಮತ್ತು ಮನೆ ಕಳೆದುಕೊಂಡಿರುವ ಸಂತ್ರಸ್ತರಿಗೆ 250

ಜನರಿಗೆ ಇವರು ಹುದ್ದೆ ಕೊಟ್ಟಿರುವುದು, ಯಾವುದೆಂದರೆ ಹೆಲ್ಪರ್, ವಾಚ್‌ಮನ್, ಸ್ವೀಪರ್ ಈ ಮೂರು ಹುದ್ದೆಗಳನ್ನು. ಇಂಜಿನಿಯರ್ ಕೆಲಸ ಮತ್ತು ಬೇರೆಬೇರೆ ಕೆಲಸಗಳನ್ನು ಬೇರೆಬೇರೆಯವರಿಗೆ ನಿಗಮದಲ್ಲಿ ಕೊಟ್ಟಿದ್ದಾರೆ. ಜಮೀನು, ಮನೆ ಕಳೆದುಕೊಂಡವರಿಗೆ ನಿಯಮಾವಳಿ ಅನುಸಾರ ನೆಲ ಒರೆಸುವುದು ಇಂಥ ಕೆಲಸಗಳನ್ನು ಕೊಟ್ಟಿದ್ದಾರೆ. ಇಂಜಿನಿಯರ್ ಕೆಲಸಗಳನ್ನು ಕೊಡುವಾಗ ಹೊರಗಡೆಯವರಿಗೆ ಕೊಟ್ಟು ಇವರನ್ನೆಲ್ಲಾ ವೈಟಿಂಗ್ ಲಿಸ್ಟ್‌ನಲ್ಲಿಟ್ಟಿದ್ದಾರೆ. ಹಿಂದೆ ಮಾನ್ಯ ಎಸ್.ಎಂ.ಕೃಷ್ಣ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೂಡ ಇದು ಚರ್ಚೆಯಾಗಿದೆ. ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಮುಳುಗಡೆ ಆಗದೇ ಇರತಕ್ಕವರಿಗೆಲ್ಲಾ ಉದ್ಯೋಗ ಕೊಟ್ಟರು. ಮುಳುಗಡೆಯಾಗಿ ಜಮೀನು ಕಳೆದುಕೊಂಡವರಿಗೆ ಉದ್ಯೋಗ ಕೊಡಲಿಲ್ಲ. ಅದರ ಬಗ್ಗೆ ಸಾಕಷ್ಟು ಗಲಾಟೆಯಾಯಿತು. ಆದ್ದರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೀರಾ? ಅವರಿಗೆ ರದ್ದು ಮಾಡಿ ಮುಳುಗಡೆಯಾದ ಕುಟುಂಬದ ಮಕ್ಕಳಿಗೆ ತಾವು ಕೆಲಸವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ? 265 ಜನರಿಗೆ ನಿಗಮದಲ್ಲಿ ಕೆಲಸ ಕೊಟ್ಟಿದ್ದೇವೆ 31ನೇ ಡಿಸೆಂಬರ್‌ವರೆಗೆ ಎಂದು ಹೇಳಿದ್ದೀರಿ. ಒಟ್ಟು ಎಷ್ಟು ಹುದ್ದೆಗಳನ್ನು ತೆಗೆದುಕೊಂಡಿದ್ದೀರಿ? ಆ ಮಾಹಿತಿಯನ್ನು ದಯವಿಟ್ಟು ಕೊಡಿ. ಜಮೀನು ಕಳೆದುಕೊಂಡವರಿಗೆ ಪರಿಹಾರ, ಪುನರ್‌ವಸತಿ ಕೊಡಲಿಲ್ಲ. ಆ ಮಕ್ಕಳಿಗೆ ಉದ್ಯೋಗವನ್ನು ಕೊಡಲಿಲ್ಲ.

ಶ್ರೀ ಶರಣಬಸಪ್ಪ ದರ್ಶನಾಪುರ್: ಮಾಹಿತಿ ಒದಗಿಸುತ್ತೇನೆ.

ಅಧ್ಯಕ್ಷರು: ಮಾಹಿತಿ ಒದಗಿಸಿರುವುದು ಆಯಿತು. ಮಾನ್ಯಸದಸ್ಯರ ಅಬ್ಜೆಕ್ಷನ್ ಏನೆಂದರೆ, ಇಂಜಿನಿಯರ್ ಆಗುವುದಕ್ಕೆ ಇತರೆ ಉದ್ಯೋಗಗಳಿಗೆ ಅರ್ಹತೆ ಇದ್ದರು ಮುಳುಗಡೆ ಪ್ರದೇಶದಿಂದ ಬಂದಂತಹವರು ಇದ್ದರೂ ಕೂಡ ಅವರನ್ನು ಅಲಕ್ಷ್ಯ ಮಾಡಿ ಬೇರೆಯವರಿಗೆ ಉದ್ಯೋಗ ಕೊಟ್ಟಿದ್ದಾರೆ. ಮುಳುಗಡೆ ಪ್ರದೇಶದವರಿಗೆ ಹೆಲ್ಪರ್, ಸ್ವೀಪರ್, ಆಟೆಂಡರ್ ಇಂತಹ ಹುದ್ದೆಗಳನ್ನು ಕೊಟ್ಟಿದ್ದಾರೆ. ಇದನ್ನು ನೀವು ಅಲ್ಲಗಳೆಯುತ್ತೀರಾ ಅಥವಾ ಒಪ್ಪಿಕೊಳ್ಳುತ್ತೀರೋ?

ಶ್ರೀ ಶರಣಬಸಪ್ಪ ದರ್ಶನಾಪುರ್: ನನ್ನಲ್ಲಿ ಅದರ ಬಗ್ಗೆ ಸಂಪೂರ್ಣವಾದ ಮಾಹಿತಿ ಇಲ್ಲ. ಎರಡು ಮೂರು ದಿವಸಗಳಲ್ಲಿ ತರಿಸಿಕೊಡುತ್ತೇನೆ.

ಅಧ್ಯಕ್ಷರು: ನಾನು ಉತ್ತರ ತರಿಸಿಕೊಡುತ್ತೇನೆ. ಮಾನ್ಯ ಸದಸ್ಯರಾದ ಜ್ಞಾನೇಂದ್ರರವರೆ, ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಜಮೀನು ಕಳೆದುಕೊಂಡಂತಹವರ ಮಕ್ಕಳು ಮತ್ತು ಅವರ ಕುಟುಂಬವರ್ಗದವರು ಅವರಿಗೆ ಅರ್ಹತೆ ಇದ್ದು ಅವರಿಗೆ ಉದ್ಯೋಗ ಕೊಡದೆ ಬರೀ ಜವಾನರ ಹುದ್ದೆಗಳನ್ನು ಕೊಟ್ಟಿದ್ದರೆ ಅದು ಬಹಳ ದೊಡ್ಡ ತಪ್ಪಾಗುತ್ತದೆ. ಮಂತ್ರಿಗಳು ಎರಡು ಮೂರು ದಿವಸಗಳಲ್ಲಿ ಉತ್ತರ ತರಿಸುತ್ತೇನೆಂದು ಹೇಳಿದ್ದಾರೆ. ಅವರಿಗೆ ಸಮಯ ಕೊಡೋಣ.

ಶ್ರೀ ಅರಗ ಜ್ಞಾನೇಂದ್ರ: ನಾನು ಹೇಳುವಂಥದ್ದು, ವಿವರ ತರಿಸುವುದು ಮಾತ್ರವಲ್ಲ ಅದರ ಬಗ್ಗೆ ಎನ್‌ಕ್ವೈರಿಯಾಗಬೇಕು. ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಡಬೇಕು.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ನಾನು ಏನು ಹೇಳುತ್ತೇನೆಂದರೆ, ಮೊದಲು ವಿವರ ಬಂದರೆ ಆನಂತರ....

'ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ವಿವರ ತರಿಸಿಕೊಡಲಿ. ಈ ಸದನದಲ್ಲಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅರ್ಹತೆ ಇದ್ದಂತಹವರಿಗೆ ಇಂಜಿನಿಯರ್ ಹುದ್ದೆಗಳಿಗೆ ಆ ಸಂತ್ರಸ್ಥ ಕುಟುಂಬದವರಿಗೆ ಅವಕಾಶ ಸಿಗದೆ, ಸಂದರ್ಶನ ಮಾಡುವಾಗ ಎಲ್ಲಾ ಅರ್ಹತೆಗಳಿದ್ದರೂ ಅವರಿಗೆ ನೌಕರಿ ಕೊಡದೆ ಬೇರೆಯವರಿಗೆ ಕೊಟ್ಟಿದ್ದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಮತ್ತೆ ಆ ರೀತಿ ಕಾನೂನುಬಾಹಿರವಾಗಿ ನೇಮಕ ಮಾಡಿಕೊಂಡಂತಹ ಹುದ್ದೆಗಳನ್ನು ರದ್ದು ಮಾಡುತ್ತೀರಾ?

ಅಧ್ಯಕ್ಷರು: ನಾನು ಹೇಳುವುದೇನೆಂದರೆ, ಆ ರೀತಿ ನಡೆದಿದ್ದರೆ ಅದು ನಮ್ಮ ಇಡೀ ಸದನಕ್ಕೆ ಅಪಮಾನವಾಗುವಂತಹ ವಿಚಾರ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಂತಹ ವಿಚಾರವನ್ನು ಸಮರ್ಥಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದುವರೆಗೆ ಈ ಸದನದಲ್ಲಿ ತಾವು ಅಷ್ಟೊಂದು ಎಚ್ಚರಿಕೆಯಿಂದ ನಮ್ಮನ್ನು ಜಾಗೃತರನ್ನಾಗಿ ಮಾಡಿ ಈ ತರಹ ಪ್ರಶ್ನೆ ಬಂದಾಗ ತಾವು ಸಲಹೆ ಕೊಡುತ್ತೀರಿ. ತಮ್ಮದೇ ಆದಂತಹ ದಾಟಿಯಲ್ಲಿ ಕೆಲವು ಎಚ್ಚರಿಕೆಯನ್ನು ಕೊಡುತ್ತೀರಿ. ಸರ್ಕಾರಕ್ಕೆ ನಿಮ್ಮ ಯಾವುದೇ ಎಚ್ಚರಿಕೆಯ ಮಾತು ತಲೆಗೆ ಹೋಗುತ್ತಿಲ್ಲ. ನಾವು ಚುನಾವಣೆ ಮುಗಿದಮೇಲೆ ಪ್ರಶ್ನೆ ಕೇಳಿದಾಗ, ನಾವು ಏಕೆ ಪ್ರಶ್ನೆ ಕೇಳುತ್ತೇವೆ? ಇಲ್ಲಿ ನಾನೇ ಹಿಂದೆ ಪ್ರಶ್ನೆ ಕೇಳಿದ್ದೆ. ಮಾನ್ಯ ಅರಗ ಜ್ಞಾನೇಂದ್ರರವರೂ ಸಹ ಪ್ರಶ್ನೆ ಕೇಳಿದ್ದಾರೆ. ದಿನಾಂಕ 18-9-1995ರಲ್ಲಿ ಕೇಳಿದ್ದೇವೆ. ಆವೊತ್ತು ಏನು ಹೇಳಿದ್ದರು 261 ಜನರಿಗೆ ಉದ್ಯೋಗ ಕೊಟ್ಟಿದ್ದೇವೆಂದು ಹೇಳಿದ್ದರು. ಇವತ್ತಿನವರೆಗೆ ನೀವು ಉದ್ಯೋಗ ಕೊಟ್ಟಿರುವುದು 265 ಜನರಿಗೆ. ಅಂದರೆ ನಾಲ್ಕಜನರಿಗೆ ಮಾತ್ರ ಹೆಚ್ಚಿಗೆ ಉದ್ಯೋಗ ಕೊಟ್ಟಿದ್ದೀರಿ. ಕಾನೂನು ಮಾಡಿಕೊಂಡಿದ್ದೀರಿ, ನಿಮ್ಮ ವ್ಯವಸ್ಥೆಯಲ್ಲಿ ಹೈಪವರ್ ಕಮಿಟಿ ಇದೆ. ಮುಖ್ಯಮಂತ್ರಿಗಳು ಬಂದು ಸಭೆ ಮಾಡಿದ್ದರು. ಆದರೂ ಪರಿಹಾರ ಸಿಗಲಿಲ್ಲ.

ಅಧ್ಯಕ್ಷರು: ತಮ್ಮಲ್ಲಿ ನಾನು ಇಷ್ಟೆ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಉಪಪ್ರಶ್ನೆ ಕೇಳಿದಾಗ ನನಗೂ ಕೂಡ ಒಂದು ರೀತಿ ಅವರು ಉತ್ತರ ಹೇಳಿದಾಗ ಸ್ವಲ್ಪ ಮನಸ್ಸಿಗೆ ಬೇಸರವಾಗಿದೆ. ವಿವರಗಳು ಬರಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು: ವಿವರಗಳು ಬರಲಿ, ಆನಂತರ ತೆಗೆದುಕೊಳ್ಳೋಣ. ಎರಡು ಮೂರು ದಿವಸಗಳಲ್ಲಿ ವಿವರ ತರಿಸುತ್ತೇನೆಂದು ಹೇಳಿದ್ದಾರೆ. ಒಂದು ವಾರ ಸಮಯ ಕೊಡೋಣ. If we get the details, we can think of the rest.

ಶ್ರೀ ಎನ್.ಯೋಗೀಶ್ ಭಟ್: ವರಾಹಿ ಜಲವಿದ್ಯುತ್ ಯೋಜನಾ ಅವಧಿಗೆ ಎಷ್ಟು ಜನರೇಟರ್‌ಗಳು ಕೆಲಸ ಮಾಡುತ್ತಿವೆ, ಎಷ್ಟು ಹಾಳಾಗಿವೆ? ಆಗಾಗ ವೈಫಲ್ಯವಾಗಲು ಕಾರಣವೇನು?

MR. SPEAKER: It is a different question. You will have to give notice. ಅಲ್ಲವೆ? ಮಂತ್ರಿಗಳು ಅಂದರೆ ಅವರೇನು ದೇವಲೋಕದಿಂದ ಬಂದಿರುತ್ತಾರೆಯೇ ಎಲ್ಲಾ ಮಾಹಿತಿ ಅವರಲ್ಲಿ ಎಲ್ಲಿರುತ್ತದೆ?

ಶ್ರೀ ಎನ್.ಯೋಗೀಶ್ ಭಟ್: ಉತ್ತರ ಕೊಡಬಹುದೆಂದು ನಿರೀಕ್ಷೆ ಮಾಡುತ್ತೇವೆ.

ಅಧ್ಯಕ್ಷರು: ಕೇಳಿದ್ದಕ್ಕೆ ಮಾಹಿತಿ ಪೂರ್ಣ ಇರುವುದಿಲ್ಲ. ಇದು ಹೊಸ ವಿಚಾರ. ತಾವು ನೋಟೀಸ್ ಕೊಡಿ ಉತ್ತರ ತರಿಸಿಕೊಡುತ್ತಾರೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ವರಾಹಿ ಯೋಜನೆಗೆ ಸಂಬಂಧಪಟ್ಟ ಪ್ರದೇಶಗಳ ಜನರಿಗೆ ಏನು ಅನ್ಯಾಯವಾಗಿದೆ ಅದೇ ಅನ್ಯಾಯ ಎಂ.ಆರ್.ಪಿ.ಎಲ್. ಯೋಜನೆಯ ಪ್ರದೇಶದ ಜನರಿಗೆ ಆಗಿದೆ. ಆ ಪ್ರದೇಶದಲ್ಲಿ ಇಂಜಿನಿಯರ್ ಪದವಿಯಾದವರು ಇದ್ದರೂ ಅವರನ್ನು ಬಿಟ್ಟು ಎಂ.ಆರ್.ಪಿ.ಎಲ್. ಕಂಪನಿಯವರು ಉತ್ತರಭಾರತದಿಂದ ಜನರನ್ನು ಕರೆಸಿ ತುಂಬುತ್ತಿದ್ದಾರೆ.

ಅಧ್ಯಕ್ಷರು: ಎಂ.ಆರ್.ಪಿ.ಎಲ್.ವಿಚಾರ ಅದು ಬೃಹತ್ ಕೈಗಾರಿಕೆಗೆ ಸಂಬಂಧಪಟ್ಟಿದ್ದು. ವರಾಹಿ ಪವರ್ ಮಿನಿಸ್ಟರ್‌ಗೆ ಸಂಬಂಧಪಟ್ಟಿದ್ದು. ತಾವು ಬೃಹತ್ ಕೈಗಾರಿಕಾ ಸಚಿವರಿಗೆ ಪ್ರಶ್ನೆ ಕಳುಹಿಸಿದರೆ ಉತ್ತರ ತರಿಸಿಕೊಡುತ್ತಾರೆ.

ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಪಡಿತರ ಸೌಲಭ್ಯ

10 (52)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೊಲೀಸ್ ಕಾನ್ಸ್‌ಟೇಬಲ್‌ರವರುಗಳಿಗೆ ನೀಡಲಾಗುತ್ತಿದ್ದ ಉಚಿತ ಪಡಿತರವನ್ನು ಸರ್ಕಾರ ನಿಲ್ಲಿಸಿರುವುದು ನಿಜವೇ? ಇದಕ್ಕೆ ಕಾರಣಗಳೇನು?